10. ಫ್ರ್ಯಾಕ್ಟಲ್ ಕಲೆಯ ಆಧುನಿಕ ಮಾಂತ್ರಿಕ ಯಾರು?

ಉತ್ತರ:

11. ಕೋಚ್ ಸ್ನೋಫ್ಲೇಕ್‌ನ ಮೊದಲ ಹಂತವನ್ನು ಮಾಡಲು ಅಗತ್ಯವಿರುವ ಅತಿಕ್ರಮಿಸದ ಸರ್ವಸಮ ಸಮಬಾಹು ತ್ರಿಕೋನಗಳ ಸಂಖ್ಯೆ ಎಷ್ಟು?

ಉತ್ತರ:

12. ಒಂದು ಚೌಕ ಘನವು ಎಷ್ಟು ಚೌಕ ಜಾಲಗಳನ್ನು ಹೊಂದಿದೆ?

ಉತ್ತರ:

13. ಒಂದು ಆಯತ ಘನವು ಎಷ್ಟು ಅಂಚುಗಳನ್ನು ಹೊಂದಿದೆ?

ಉತ್ತರ:

14. ಶಂಕುವಿನ ಪಕ್ಕದ ನೋಟ ಯಾವ ಆಕಾರದಲ್ಲಿ ಕಾಣುತ್ತದೆ?

ಉತ್ತರ:

@KTBS
NOT TO BE REPUBLISHED

**III.** **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(ಎರಡು ಅಂಕಗಳ ಪ್ರಶ್ನೆಗಳು)**

15. ಸಿಯರ್ಪಿನ್ಸ್ಕಿ ತ್ರಿಭುಜಕ್ಕೆ ಕಾರಣವಾಗುವ ಆಕಾರ ಅನುಕ್ರಮದ ಪ್ರತಿ ಹಂತದಲ್ಲಿ ಉಳಿದಿರುವ ರಂಧ್ರಗಳ ಸಂಖ್ಯೆ ಮತ್ತು ತ್ರಿಭುಜಗಳನ್ನು ಕಂಡುಹಿಡಿಯಿರಿ.

ಉತ್ತರ:

16. ಕೋಚ್ ಸ್ನೋಫ್ಲೇಕ್‌ಗೆ ಕಾರಣವಾಗುವ ಆಕಾರ ಅನುಕ್ರಮದ n ನೇ ಹಂತದಲ್ಲಿ ಬದಿಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

ಉತ್ತರ:

17. ಜ್ಯಾಮಿತಿಯಲ್ಲಿ ಜಾಲ ಎಂದರೇನು? ಉದಾಹರಣೆ ಕೊಡಿ.

ಉತ್ತರ:

18. ನಿಯಮಿತ ಟೆಟ್ರಾಹೆಡ್ರನ್‌ನ ಜಾಲ ಎಂದರೇನು? ಕೆಳಗಿನವುಗಳಲ್ಲಿ ಯಾವುವು ನಿಯಮಿತ ಟೆಟ್ರಾಹೆಡ್ರನ್‌ನ ಜಾಲಗಳು ?




@KTBS
NOT TO BE REPUBLISHED

ಉತ್ತರ:

19. ಪಟ್ಟಕ ಮತ್ತು ಪಿರಮಿಡ್ ನಡುವಿನ ವ್ಯತ್ಯಾಸ ಬರೆಯಿರಿ.

ಉತ್ತರ:

20. 5 ಸೆಂ.ಮೀ., 2 ಸೆಂ.ಮೀ ಮತ್ತು 1 ಸೆಂ.ಮೀ. ಪಾರ್ಶ್ವ ಉದ್ದಗಳನ್ನು ಹೊಂದಿರುವ ಆಯತ ಘನದ ಜಾಲವನ್ನು ಎಳೆಯಿರಿ.

ಉತ್ತರ:

21. ಒಂದೇ ರೀತಿಯ ಚೌಕ ಘನಗಳ ಈ ರಾಶಿಯಲ್ಲಿರುವ ಒಟ್ಟು ಚೌಕ ಘನಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

ಉತ್ತರ:



@KTBS
NOT TO BE REPUBLISHED

**IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(ಮೂರು ಅಂಕದ ಪ್ರಶ್ನೆಗಳು)**

22. ಈ ಕೆಳಗಿನವುಗಳಲ್ಲಿ ಚೌಕ ಘನದ ಜಾಲಗಳು ಯಾವುವು ?



(i)



(ii)



(iii)



(iv)



(v)



(vi)

23. ಕೆಳಗಿನ ಪ್ರತಿಯೊಂದು ಸಂಯೋಜನೆಯ ಮೇಲಿನ ದೃಶ್ಯ, ಮುಂಭಾಗದ ದೃಶ್ಯ ಮತ್ತು ಪಕ್ಕದ ದೃಶ್ಯವನ್ನು ಬರೆಯಿರಿ.

| | ಮೇಲಿನ ದೃಶ್ಯ | ಮುಂಭಾಗದ ದೃಶ್ಯ | ಪಕ್ಕದ ದೃಶ್ಯ |
|---|---|---|---|
|   | | | |
|   | | | |
|   | | | |

@KTBS NOT TO BE REPUBLISHED

24. ಪಟ್ಟಕದ ಸರ್ವಸಮ ಬಹುಭುಜಾಕೃತಿಗಳು n ಬಾಹುಗಳನ್ನು ಹೊಂದಿದ್ದರೆ, ಪಟ್ಟಕವು ಹೊಂದಿರುವ ಮುಖಗಳು, ಅಂಚುಗಳು ಮತ್ತು ಶೃಂಗಗಳ ಸಂಖ್ಯೆಯನ್ನು ಬರೆಯಿರಿ. ಬಹುಭುಜಾಕೃತಿಗಳು 10 ಬಾಹುಗಳನ್ನು ಹೊಂದಿದ್ದಾಗ ಮುಖಗಳು, ಅಂಚುಗಳು ಮತ್ತು ಶೃಂಗಗಳ ಸಂಖ್ಯೆಯನ್ನು ಬರೆಯಿರಿ.

ಉತ್ತರ:

25. ನೀಡಿರುವ ಐಸೋಮೆಟ್ರಿಕ್ ಗ್ರಿಡ್‌ನಲ್ಲಿ ಈ ಕೆಳಗಿನ ಆಕೃತಿಗಳನ್ನು ಬರೆಯಿರಿ.





@KTBS
NOT TO BE REPUBLISHED

26. ಕೆಳಗಿನ ಪ್ರತಿಯೊಂದನ್ನು ಅದರ ಪ್ರಕ್ಷೇಪಗಳೊಂದಿಗೆ ಹೊಂದಿಸಿ ಬರೆಯಿರಿ.




**V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(ನಾಲ್ಕು ಅಂಕದ ಪ್ರಶ್ನೆಗಳು)**

27. ಸಿಯರ್ಪಿನ್ಸ್ಕಿ ಫ್ರ್ಯಾಕ್ಟಲ್‌ಗಳಿಗೆ ಕಾರಣವಾಗುವ ಪ್ರತಿಯೊಂದು ಆಕಾರ ಅನುಕ್ರಮದಲ್ಲಿ n ನೇ ಹಂತದಲ್ಲಿ ಉಳಿದಿರುವ ಪ್ರದೇಶದ ವಿಸ್ತೀರ್ಣವನ್ನು ಕಂಡುಹಿಡಿಯಿರಿ. ಆರಂಭಿಕ ಚೌಕ/ತ್ರಿಭುಜದ ವಿಸ್ತೀರ್ಣವನ್ನು 1 ಚದರ ಘಟಕಕ್ಕೆ ತೆಗೆದುಕೊಳ್ಳಿ.

ಉತ್ತರ:

@KTBS NOT TO BE REPUBLISHED

28. ಈ ಕೆಳಗಿನ ಪ್ರತಿಯೊಂದು ಪ್ರಕರಣದಲ್ಲಿ ಉಂಟಾಗುವ ಘನವನ್ನು ಹೆಸರಿಸಿ.

a. ಒಂದು ದೃಷ್ಟಿಕೋನದಿಂದ ಆಯತಾಕಾರದ ಪ್ರೊಫೈಲ್ ಇನ್ನೊಂದು ದೃಷ್ಟಿಕೋನದಿಂದ ವೃತ್ತಾಕಾರದ ಪ್ರೊಫೈಲ್ ಹೊಂದಿರುವ ಘನವಸ್ತು

b. ಒಂದು ದೃಷ್ಟಿಕೋನದಿಂದ ವೃತ್ತಾಕಾರದ ಪ್ರೊಫೈಲ್ ಇನ್ನೊಂದು ದೃಷ್ಟಿಕೋನದಿಂದ ತ್ರಿಕೋನ ಪ್ರೊಫೈಲ್ ಹೊಂದಿರುವ ಘನವಸ್ತು

c. ಒಂದು ದೃಷ್ಟಿಕೋನದಿಂದ ಆಯತಾಕಾರದ ಪ್ರೊಫೈಲ್ ಇನ್ನೊಂದು ದೃಷ್ಟಿಕೋನದಿಂದ ತ್ರಿಕೋನ ಪ್ರೊಫೈಲ್ ಹೊಂದಿರುವ ಘನವಸ್ತು

d. ಒಂದು ದೃಷ್ಟಿಕೋನದಿಂದ ತ್ರಾಪಿಜ್ಯ ಪ್ರೊಫೈಲ್ ಇನ್ನೊಂದು ದೃಷ್ಟಿಕೋನದಿಂದ ವೃತ್ತಾಕಾರದ ಪ್ರೊಫೈಲ್ ಹೊಂದಿರುವ ಘನವಸ್ತು

ಉತ್ತರ:–

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ಫ್ರ್ಯಾಕ್ಟಲ್‌ಗಳು ಮತ್ತು ಮಾದರಿಗಳನ್ನು ಅರ್ಥಮಾಡಿಕೊಂಡು ಜ್ಯಾಮಿತೀಯ ಫ್ರ್ಯಾಕ್ಟಲ್‌ಗಳನ್ನು ನಿರ್ಮಿಸುವೆ. | | | |
| 2 | ಪ್ರಕ್ಷೇಪಗಳು ಮತ್ತು ಐಸೊಮೆಟ್ರಿಕ್ ಚಿತ್ರಗಳನ್ನು ಬಳಸಿಕೊಂಡು ಘನ ಆಕಾರಗಳನ್ನು ದೃಶ್ಯೀಕರಿಸುವೆ. | | | |
| 3 | ಜ್ಯಾಮಿತೀಯ ತಾರ್ಕಿಕತೆ, ಸಮ್ಮಿತಿ ಮತ್ತು ಆಕಾರಗಳನ್ನು ತಿಳಿದಿರುವೆ. | | | |

**ಶಿಕ್ಷಕರ ಅಭಿಪ್ರಾಯ (✓ ಮಾಡಿ)**

| | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |

## ಘಟಕ ಪರೀಕ್ಷೆ:

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆಯ್ದು ಅದರ ಕ್ರಮಾಂಕದೊಂದಿಗೆ ಬರೆಯಿರಿ.**

1. ಕೆಳಗಿನ ಯಾವ ಕ್ಷೇತ್ರಗಳು ಫ್ರ್ಯಾಕ್ಟಲ್ ಜಿಯೋಮೆಟ್ರಿಯನ್ನು ಬಳಸುತ್ತವೆ

(A) ಕಂಪ್ಯೂಟರ್ ಗ್ರಾಫಿಕ್ಸ್ (B) ವೈದ್ಯಕೀಯ ಕ್ಷೇತ್ರ

(C) ಹವಾಮಾನ ಮುನ್ಸೂಚನೆ (D) ಮೇಲಿನ ಎಲ್ಲವೂ

ಉತ್ತರ:

2. ಕೋಚ್ ಸ್ನೋ ಫ್ಲೇಕ್‌ನ ಮೊದಲ ಹಂತವನ್ನು ಮಾಡಲು ಅಗತ್ಯವಿರುವ ಅತಿಕ್ರಮಿಸದ ಸರ್ವಸಮ ಸಮಬಾಹು ತ್ರಿಕೋನಗಳ ಸಂಖ್ಯೆ

(A) 3 (B) 6 (C) 9 (D) 12

ಉತ್ತರ:

3. ಒಂದು ನಿಯಮಿತಿ ಷಡ್ಭುಜಾಕೃತಿಯು ಎಷ್ಟು ಸಮಮಿತಿ ರೇಖೆಗಳನ್ನು ಹೊಂದಿದೆ.

ಉತ್ತರ:

4. 6 ಸೆಂ.ಮೀ., 4 ಸೆಂ.ಮೀ. ಮತ್ತು 2 ಸೆಂ.ಮೀ. ಪಾರ್ಶ್ವ ಉದ್ದಗಳನ್ನು ಹೊಂದಿರುವ ಆಯತಘನ ಜಾಲವನ್ನು ಎಳೆಯಿರಿ.

ಉತ್ತರ:

5. ಈ ಕೆಳಗಿನ ಪ್ರತಿಯೊಂದು ಪ್ರಕರಣದಲ್ಲಿ ಉಂಟಾಗುವ ಘನವನ್ನು ಹೆಸರಿಸಿ.

a. ವೃತ್ತಾಕಾರದ ಬಾಹ್ಯರೇಖೆಯನ್ನು ಹೊಂದಿರುವ ಘನವಸ್ತುವಿನ ಪ್ರೊಫೈಲ್

b. ಒಂದು ದೃಷ್ಟಿಕೋನದಿಂದ ವೃತ್ತಾಕಾರದ ಪ್ರೊಫೈಲ್ ಇನ್ನೊಂದು ದೃಷ್ಟಿಕೋನದಿಂದ ತ್ರಿಕೋನ ಪ್ರೊಫೈಲ್ ಹೊಂದಿರುವ ಘನವಸ್ತು

c. ಒಂದು ದೃಷ್ಟಿಕೋನದಿಂದ ಪಂಚಭುಜಾಕೃತಿ ಪ್ರೊಫೈಲ್ ಇನ್ನೊಂದು ದೃಷ್ಟಿಕೋನದಿಂದ ಆಯತಾಕಾರದ ಪ್ರೊಫೈಲ್ ಹೊಂದಿರುವ ಘನವಸ್ತು

ಉತ್ತರ:

@KTBS NOT TO BE REPUBLISHED

## ಅಧ್ಯಾಯ–5
## ಚುಕ್ಕೆಗಳು ಮತ್ತು ರೇಖೆಗಳ ಮೂಲಕ ಕಥೆಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.**

1. ಒಂದು ದತ್ತಾಂಶ ಸಮೂಹದಲ್ಲಿನ ಪ್ರತಿಯೊಂದು ಮೌಲ್ಯವನ್ನು 7 ರಿಂದ ಹೆಚ್ಚಿಸಿದರೆ, ಹೊಸ ಸರಾಸರಿಯು

   (A) ಹಾಗೆಯೇ ಉಳಿಯುತ್ತದೆ (B) 7 ರಿಂದ ಹೆಚ್ಚಾಗುತ್ತದೆ

   (C) 14 ರಿಂದ ಹೆಚ್ಚಾಗುತ್ತದೆ (D) 7 ರಿಂದ ಗುಣಿಸಲ್ಪಟ್ಟಿರುತ್ತದೆ

ಉತ್ತರ: ______________________________

2. ಚುಕ್ಕೆ ನಕ್ಷೆಯಲ್ಲಿ, ಸರಾಸರಿಯನ್ನು "ಕೇಂದ್ರ" ಎಂದು ಪರಿಗಣಿಸಲಾಗುತ್ತದೆ ಏಕೆಂದರೆ

   (A) ಇದು ಅತ್ಯಂತ ಪುನರಾವರ್ತಿತ ಮೌಲ್ಯ (B) ಇದು ಮಧ್ಯದ ಸಂಖ್ಯೆ

   (C) ಇದು ಅತ್ಯುನ್ನತ ಮೌಲ್ಯವಾಗಿದೆ (D) ಎರಡೂ ಬದಿಗಳಲ್ಲಿನ ಅಂತರಗಳ ಮೊತ್ತ ಸಮಾನವಾಗಿರುತ್ತದೆ

ಉತ್ತರ: ______________________________

3. ದತ್ತಾಂಶ ಸಂಗ್ರಹದಲ್ಲಿನ ಪ್ರತಿಯೊಂದು ಮೌಲ್ಯವನ್ನು ದ್ವಿಗುಣಗೊಳಿಸಿದರೆ, ಹೊಸ ಸರಾಸರಿಯು

   (A) ಹಳೆಯ ಸರಾಸರಿಯ ಅರ್ಧದಷ್ಟು (B) ಯಾವುದೇ ಬದಲಾವಣೆಯಾಗುವುದಿಲ್ಲ

   (C) ದ್ವಿಗುಣಗೊಳ್ಳುತ್ತದೆ (D) 2 ಹೆಚ್ಚಾಗುತ್ತದೆ

ಉತ್ತರ: ______________________________

4. ದತ್ತಾಂಶ 5, 8, 12, 15, 20 ರ ಸರಾಸರಿಯು

   (A) 12 (B) 8 (C) 15 (D) 10

ಉತ್ತರ: ______________________________

© KTBS NOT TO BE REPUBLISHED

5. ನಾಲ್ಕು ಸಂಖ್ಯೆಗಳ ಸರಾಸರಿಯು 10 ಆದರೆ, ಅವುಗಳ ಒಟ್ಟು ಮೊತ್ತವು

(A) 40 (B) 20 (C) 10 (D) 5

ಉತ್ತರ: ______________________

6. ಒಂದು ದತ್ತಾಂಶ ಸಂಗ್ರಹದ ಸರಾಸರಿ 25 ಆಗಿದ್ದರೆ ಮತ್ತು ಪ್ರತಿ ಸಂಖ್ಯೆಯನ್ನು 5 ರಿಂದ ಕಡಿಮೆ ಮಾಡಿದರೆ, ಹೊಸ ಸರಾಸರಿಯು

(A) 4 (B) 20 (C) 25 (D) 30

ಉತ್ತರ: ______________________

7. ಸ್ಪ್ರೆಡ್‌ಶೀಟ್‌ನಲ್ಲಿ, ಅಡ್ಡಸಾಲು ಮತ್ತು ಕಂಬಸಾಲಿನ ಛೇದಕವನ್ನು ಹೀಗೆನ್ನುವರು.

(A) ಬಾಕ್ಸ್ (B) ಕೋಶ (C) ಗ್ರಿಡ್ (D) ಪಾಯಿಂಟ್

ಉತ್ತರ: ______________________

8. ಸ್ಪ್ರೆಡ್‌ಶೀಟ್‌ನಲ್ಲಿ ಕೋಶಗಳ ವ್ಯಾಪ್ತಿಯಲ್ಲಿ (C1 ರಿಂದ C20) ದೊಡ್ಡ ಮೌಲ್ಯವನ್ನು ಕಂಡುಹಿಡಿಯಲು ಸರಿಯಾದ ಸೂತ್ರವು

(A) =MAX(C1:C20) (B) =HIGH(C1:C20)

(C) =LARGE(C1:C20) (D) =SUM(C1:C20)

ಉತ್ತರ: ______________________

9. ಸ್ಪ್ರೆಡ್‌ಶೀಟ್‌ನಲ್ಲಿ ಈ ಸೂತ್ರವು B2 ರಿಂದ B10 ಕೋಶಗಳ ಸರಾಸರಿಯನ್ನು ಲೆಕ್ಕಾಚಾರ ಮಾಡುತ್ತದೆ.

(A) =SUM(B2:B10) (B) =COUNT(B2:B10)

(C) =MEAN(B2:B10) (D) =AVERAGE(B2:B10)

ಉತ್ತರ: ______________________

@KTBS NOT TO BE REPUBLISHED

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(1 ಅಂಕದ ಪ್ರಶ್ನೆಗಳು)**

10. ದತ್ತಾಂಶ 3, 5, 7, 9, 11 (ಸರಾಸರಿ = 7) ದತ್ತಾಂಶ ಬಿಂದುಗಳಿಗೆ "ಸಮತೋಲನ ಗುಣಲಕ್ಷಣ"ವನ್ನು ಎರಡೂ ಬದಿಗಳಲ್ಲಿನ ಅಂತರಗಳ ಮೊತ್ತವನ್ನು ಲೆಕ್ಕಹಾಕುವ ಮೂಲಕ ಪರಿಶೀಲಿಸಿ.

ಉತ್ತರ:

11. ಒಂದು ದತ್ತಾಂಶ ಸಂಗ್ರಹವು 20 ರ ಸರಾಸರಿಯನ್ನು ಹೊಂದಿರುತ್ತದೆ. ಪ್ರತಿ ಮೌಲ್ಯವನ್ನು 3 ರಿಂದ ಗುಣಿಸಿ ನಂತರ ಪ್ರತಿಯೊಂದಕ್ಕೂ 5 ಅನ್ನು ಸೇರಿಸಿದರೆ, ಹೊಸ ಸರಾಸರಿ ಏನು?

ಉತ್ತರ:

@KTBS NOT TO BE REPUBLISHED

12. ಐದು ಸಂಖ್ಯೆಗಳ ಸರಾಸರಿ 20 ಆಗಿದ್ದರೆ, ಅವುಗಳ ಒಟ್ಟು ಮೊತ್ತ ಎಷ್ಟು?

ಉತ್ತರ:

13. ಈ ದತ್ತಾಂಶಗಳ ಮಧ್ಯಾಂಕ ಬರೆಯಿರಿ 5, 12, 3, 8, 10.

ಉತ್ತರ:

14. B2, B3, B4, ಮತ್ತು B5 ಕೋಶಗಳಲ್ಲಿನ ಒಟ್ಟು ಮೊತ್ತವನ್ನು ಲೆಕ್ಕಾಚಾರ ಮಾಡಲು ಸ್ಪ್ರೆಡ್‌ಶೀಟ್ ಸೂತ್ರವನ್ನು ಬರೆಯಿರಿ.

ಉತ್ತರ:

15. 10 ವರ್ಷಗಳಲ್ಲಿ ವಿದ್ಯಾರ್ಥಿಯ ಎತ್ತರವು ಹೇಗೆ ಬದಲಾಗುತ್ತದೆ ಎಂಬುದನ್ನು ತೋರಿಸಲು ಯಾವ ಗ್ರಾಫ್ ಉತ್ತಮವಾಗಿದೆ?

ಉತ್ತರ:

**III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (2 ಅಂಕದ ಪ್ರಶ್ನೆಗಳು)**

16. ನೀಡಿರುವ ದತ್ತಾಂಶಗಳಿಗೆ ಸರಳ ಚುಕ್ಕೆ ನಕ್ಷೆಯನ್ನು ಬರೆಯಿರಿ: 2, 4, 4, 5, 7, 7, 7, 8.

ಉತ್ತರ:

17. 6 ಸಂಖ್ಯೆಗಳ ಸರಾಸರಿ 13 ಆಗಿದ್ದು, ಈ ಸಂಖ್ಯೆಗಳಿಗೆ 8 ಮತ್ತು 10ನ್ನು ಸೇರಿಸಿದರೆ ದೊರೆಯುವ ಹೊಸ ಸರಾಸರಿಯನ್ನು ಲೆಕ್ಕಹಾಕಿ.

@KTBS
NOT TO BE REPUBLISHED

ಉತ್ತರ:

18. 5 ಸ್ನೇಹಿತರ ಸರಾಸರಿ ವಯಸ್ಸು 16 ವರ್ಷ ಆಗಿದ್ದರೆ ಮತ್ತು ನಾಲ್ಕು ಸ್ನೇಹಿತರ ವಯಸ್ಸು 12, 14, 18 ಮತ್ತು 20 ವರ್ಷಗಳಾಗಿದ್ದರೆ, ಐದನೇ ಸ್ನೇಹಿತನ ವಯಸ್ಸನ್ನು ಕಂಡುಹಿಡಿಯಿರಿ.

ಉತ್ತರ:

19. 6 ಸಂಖ್ಯೆಗಳ ಸರಾಸರಿ 12. ಒಂದು ಸಂಖ್ಯೆಯನ್ನು ಹೊರತುಪಡಿಸಿದರೆ, ಸರಾಸರಿ 11 ಆಗುತ್ತದೆ. ಹೊರತುಪಡಿಸಲಾದ ಸಂಖ್ಯೆಯನ್ನು ಕಂಡುಹಿಡಿಯಿರಿ,

ಉತ್ತರ:

20. 6, 7, 12, 14, 16 ಎಂಬ ದತ್ತಾಂಶಗಳನ್ನು ನೀಡಲಾಗಿದೆ. ಈ ದತ್ತಾಂಶಗಳಿಗೆ ಸರಾಸರಿಯನ್ನು ಲೆಕ್ಕಹಾಕಿ. ಸರಾಸರಿಯಿಂದ ಎಲ್ಲಾ ಬಿಂದುಗಳ ಅಂತರದ ಮೊತ್ತ ಶೂನ್ಯ ಎಂದು ತೋರಿಸಿ.

ಉತ್ತರ:

@KTBS
NOT TO BE REPUBLISHED

21. 6 ಸಂಖ್ಯೆಗಳ ಸರಾಸರಿ 15 ಆಗಿದ್ದು ಮತ್ತು ಒಂದು ಸಂಖ್ಯೆಯನ್ನು ತೆಗೆದಾಗ ಸರಾಸರಿಯು 14 ಆಗುತ್ತದೆ. ಹಾಗಾದರೆ ತೆಗೆದುಹಾಕಲಾದ ಸಂಖ್ಯೆಯನ್ನು ಕಂಡುಹಿಡಿಯಿರಿ.

ಉತ್ತರ:

**IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(3 ಅಂಕದ ಪ್ರಶ್ನೆಗಳು)**

22. 8 ಆಟಗಾರರ ಸರಾಸರಿ ತೂಕವು 39.2 ಕೆಜಿ ಆಗಿದ್ದು 7 ಆಟಗಾರರು 42, 40, 39, 33, 48, 38, ಮತ್ತು 42 ಕೆಜಿ ತೂಕವಿದ್ದರೆ, 8 ನೇ ಆಟಗಾರನ ತೂಕವನ್ನು ಕಂಡುಹಿಡಿಯಿರಿ.

ಉತ್ತರ:

@KTBS
NOT TO BE REPUBLISHED

23. ಒಂದು ಸ್ಪ್ರೆಡ್‌ಶೀಟ್‌ನಲ್ಲಿ (i) A1:A20 ರ ಮೊತ್ತ, (ii) D5:D15 ರ ಸರಾಸರಿ, ಮತ್ತು (iii) B2:B10 ರ ಗರಿಷ್ಠ ಇವುಗಳನ್ನು ಕಂಡುಹಿಡಿಯಲು ನಿಖರವಾದ ಸೂತ್ರಗಳನ್ನು ಬರೆಯಿರಿ.

ಉತ್ತರ:

24. ನೀಡಿರುವ ದತ್ತಾಂಶಗಳನ್ನು ಪರಿಗಣಿಸಿ 10, 10, 11, 17.

(i) ಸರಾಸರಿಯನ್ನು ಲೆಕ್ಕಹಾಕಿ.

(ii) ಸರಾಸರಿಗಿಂತ ಕಡಿಮೆ ಇರುವ ಬಿಂದುಗಳ ಅಂತರಗಳ ಮೊತ್ತವು ಸರಾಸರಿಗಿಂತ ಹೆಚ್ಚಿನ ಬಿಂದುವಿನ ಅಂತರಕ್ಕೆ ಸಮನಾಗಿರುತ್ತದೆ ಎಂದು ತೋರಿಸಿ.

(iii) ನೀವು ಈ ಗುಂಪಿಗೆ 22 ರ ಮೌಲ್ಯವನ್ನು ಸೇರಿಸಿದರೆ, ಹೊಸ ಸರಾಸರಿ ಏನು?

ಉತ್ತರ:

©KTBS
NOT TO BE REPUBLISHED

25. ಪ್ರತಿ 2 ಗಂಟೆಗಳಿಗೊಮ್ಮೆ ನಗರದ ತಾಪಮಾನ ದಾಖಲಾಗುವುದನ್ನು ರೇಖಾನಕ್ಷೆಯು ತೋರಿಸುತ್ತದೆ:

(ಬೆಳಿಗ್ಗೆ 8:20°C, ಬೆಳಿಗ್ಗೆ 10:24°C, ಮಧ್ಯಾಹ್ನ 12:30°C, ಮಧ್ಯಾಹ್ನ 2:32°C, ಸಂಜೆ 4:28°C).




i. ಯಾವ ಸಮಯದಲ್ಲಿ ಅತ್ಯಂತ ಬಿಸಿಯಾಗಿತ್ತು?

ii. ಈ ವಾಚನಗಳ ಆಧಾರದ ಮೇಲೆ ದಿನದ ಸರಾಸರಿ ತಾಪಮಾನ ಎಷ್ಟು?

iii. ತಾಪಮಾನದ "ವ್ಯಾಪ್ತಿ" ಎಷ್ಟು?

ಉತ್ತರ:

**V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (4 ಅಂಕದ ಪ್ರಶ್ನೆಗಳು)**

26. ಕೆಳಗಿನ ದತ್ತಾಂಶಗಳ ಸರಾಸರಿಯನ್ನು ಕಂಡುಹಿಡಿಯಿರಿ.

(i) ಮೊದಲ 100 ನೈಸರ್ಗಿಕ (ಸ್ವಾಭಾವಿಕ) ಸಂಖ್ಯೆಗಳು.

(ii) ಮೊದಲ 40 ಬೆಸ ಸಂಖ್ಯೆಗಳು.

(iii) 5ರ ಮೊದಲ 40 ಗುಣಾಕಾರಗಳು.

ಉತ್ತರ:

@KTBS
NOT TO BE REPUBLISHED

27. ಈ ಕೆಳಗಿನ ನಕ್ಷೆಯು ಕೋವಲಂ, ಉಡುಪಿ ಮತ್ತು ಮುಂಬೈ ನಗರಗಳ ಮಳೆ ಪ್ರಮಾಣವನ್ನು ಹೋಲಿಸುತ್ತದೆ.




i. ಯಾವ ತಿಂಗಳಿನಲ್ಲಿ ಉಡುಪಿ ನಗರವು ಅತಿ ಹೆಚ್ಚು (ಸುಮಾರು 900 ಮಿ.ಮೀ) ಮಳೆಯನ್ನು ಪಡೆಯುತ್ತದೆ?

ii. ಜೂನ್ ತಿಂಗಳಿನಲ್ಲಿ ಮುಂಬೈಗಿಂತ ಹೆಚ್ಚಿನ ಮಳೆ ಪಡೆಯುವ ನಗರ ಯಾವುದು?

iii. ಕೋವಲಂ ನಗರದಲ್ಲಿ ವರ್ಷದ ಯಾವ ತಿಂಗಳಲ್ಲಿ ಮಳೆಯ ಪ್ರಮಾಣವು ಅತ್ಯಂತ ಕಡಿಮೆ ಇರುತ್ತದೆ?

iv. ಮುಂಬೈ ನಗರದಲ್ಲಿ ಮಳೆಯು ಜೂನ್‌ನಲ್ಲಿ ಪ್ರಾರಂಭವಾಗಿ ಯಾವ ತಿಂಗಳ ವೇಳೆಗೆ ಸಂಪೂರ್ಣವಾಗಿ ಇಳಿಮುಖವಾಗುತ್ತದೆ?

ಉತ್ತರ:

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ವಿದ್ಯಾರ್ಥಿಗಳ ಕಚ್ಚಾ ದತ್ತಾಂಶ ಡಾಟ್‌ಪ್ಲಾಟ್ ಬಳಸಿಕೊಂಡು ಕೇಂದ್ರೀಯ ಪ್ರವೃತ್ತಿಯ ಅಳತೆಗಳನ್ನು ಲೆಕ್ಕಿಸುವೆ. | | | |
| 2 | ಲೈನ್‌ಗ್ರಾಫ್, ಕ್ಲಸ್ಟರ್ಡ್ ಬಾರ್ ಗ್ರಾಫ್‌ಗಳು ಮತ್ತು ಇನ್ಫೋಗ್ರಾಫಿಕ್ಸ್ ವಿವಿಧ ದತ್ತಾಂಶಗಳನ್ನು ವಿವರಿಸುವೆ ಮತ್ತು ದೃಶ್ಯೀಕರಿಸುವೆ. | | | |
| 3 | SUM, AVERAGE, MAX ಸೂತ್ರಗಳನ್ನು ಸರಿಯಾಗಿ ಬಳಸಬಲ್ಲೆನು ಮತ್ತು ಅವುಗಳ ಅರ್ಥವನ್ನು ವಿವರಿಸುವೆನು. | | | |

**ಶಿಕ್ಷಕರ ಅಭಿಪ್ರಾಯ (✓ ಮಾಡಿ)**

| | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |

© KTBS NOT TO BE REPUBLISHED

### ಘಟಕ ಪರೀಕ್ಷೆ:

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.**

1. ದತ್ತಾಂಶ 10, 15, 20, 25, 30 ರ ಸರಾಸರಿಯು

(A) 15 (B) 20 (C) 25 (D) 10

ಉತ್ತರ: ______________________

2. 10 ಸಂಖ್ಯೆಗಳ ಸರಾಸರಿ 20 ಆಗಿದ್ದರೆ, ಅವುಗಳ ಒಟ್ಟು ಮೊತ್ತ ಎಷ್ಟು?

(A) 100 (B) 200 (C) 30 (D) 2

ಉತ್ತರ: ______________________

3. ಸ್ಪ್ರೆಡ್‌ಶೀಟ್‌ನಲ್ಲಿ 'ಕಾಲಮ್'ಗಳನ್ನು ಯಾವುದರಿಂದ ಗುರುತಿಸಲಾಗುತ್ತದೆ?

(A) ಸಂಖ್ಯೆಗಳು (1, 2, 3...) (B) ಅಕ್ಷರಗಳು (A, B, C...)

(C) ಚಿಹ್ನೆಗಳು (@, #, $...) (D) ರೋಮನ್ ಅಂಕಿಗಳು

ಉತ್ತರ: ______________________

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

4. ದತ್ತಾಂಶ 20, 22, 24, 26, 28 ರ ಸರಾಸರಿಯನ್ನು ಕಂಡುಹಿಡಿಯಿರಿ.

ಉತ್ತರ:

5. ಸ್ಪ್ರೆಡ್‌ಶೀಟ್‌ನಲ್ಲಿ A1 ಕೋಶವು ಯಾವುದನ್ನು ಸೂಚಿಸುತ್ತದೆ?

ಉತ್ತರ:

6. ಸ್ಪ್ರೆಡ್‌ಶೀಟ್‌ನಲ್ಲಿ ದತ್ತಾಂಶದ ಸರಾಸರಿ ಕಂಡುಹಿಡಿಯಲು ಬಳಸುವ ಸೂತ್ರ ಯಾವುದು?

ಉತ್ತರ:

©KTBS NOT TO BE REPUBLISHED

**III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

7. 4 ಸ್ನೇಹಿತರ ಸರಾಸರಿ ವಯಸ್ಸು 20 ವರ್ಷಗಳು. ಅವರಲ್ಲಿ 3 ಸ್ನೇಹಿತರ ವಯಸ್ಸು ಕ್ರಮವಾಗಿ 18, 22, 19 ವರ್ಷ ಆಗಿದ್ದರೆ, 4ನೇ ಸ್ನೇಹಿತನ ವಯಸ್ಸು ಎಷ್ಟು?

ಉತ್ತರ:

8. ಸ್ಪ್ರೆಡ್‌ಶೀಟ್‌ನಲ್ಲಿ A1:A10 ಕೋಶಗಳಲ್ಲಿರುವ ಸಂಖ್ಯೆಗಳ ಮೊತ್ತ ಮತ್ತು ಸರಾಸರಿಯನ್ನು ಕಂಡುಹಿಡಿಯಲು ಬಳಸುವ ಸೂತ್ರಗಳನ್ನು ಬರೆಯಿರಿ.

ಉತ್ತರ:

9. ಚುಕ್ಕೆ ನಕ್ಷೆಯನ್ನು ಬಳಸಿಕೊಂಡು 5, 5, 5, 6, 7, 8, 9, 9, 9 ಮೌಲ್ಯಗಳ ಸರಾಸರಿ ಕಂಡುಹಿಡಿಯಿರಿ.

ಉತ್ತರ:

@KTBS
NOT TO BE REPUBLISHED

**IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(03 × 02 = 06)**

10. ಒಂದು ಕಂಪನಿಯ ಕಳೆದ 10 ವರ್ಷಗಳ ಲಾಭದ (ರೂಪಾಯಿಗಳಲ್ಲಿ) ರೇಖಾ ನಕ್ಷೆಯನ್ನು ಆಧರಿಸಿ.

(i) ಅತಿ ಹೆಚ್ಚು ಲಾಭವಾದ ವರ್ಷ ಯಾವುದು?

(ii) ಅತಿ ಕಡಿಮೆ ಲಾಭವಾದ ವರ್ಷ ಯಾವುದು?

(iii) ಲಾಭವು ನಿರಂತರವಾಗಿ ಹೆಚ್ಚಾದ ಅವಧಿ ಯಾವುದು?

(iv) 5ನೇ ವರ್ಷದ ನಂತರ ಲಾಭದಲ್ಲಿನ ಪ್ರವೃತ್ತಿ (Trend) ಹೇಗಿದೆ?




@KTBS
NOT TO BE REPUBLISHED

# ಅಧ್ಯಾಯ–6
# ಬೀಜಗಣಿತ ಆಟ

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.**

1. ಒಂದು ಸಂಖ್ಯೆಯನ್ನು ದ್ವಿಗುಣಗೊಳಿಸಿ ನಾಲ್ಕು ಸೇರಿಸಿದಾಗ ಸಿಗುವ ಬೀಜೋಕ್ತಿ

   (A) $4x + 2$ (B) $2x + 2$ (C) $2x + 4$ (D) $2(x + 4)$

ಉತ್ತರ: ____________________

2. ಯಾವುದೇ ಒಂದೇ ರೀತಿಯ ಮೂರು ಅಂಕಿಗಳ ಸಂಖ್ಯೆಗಳನ್ನು ತೆಗೆದುಕೊಳ್ಳಿ (ಉದಾ: 222, 555, 999) ಈ ಮೂರು ಅಂಕಿಗಳ ಮೊತ್ತದಿಂದ ಆ ಸಂಖ್ಯೆಗಳನ್ನು ಭಾಗಿಸಿದರೆ ಬರುವ ಸ್ಥಿರ ಸಂಖ್ಯೆಯು

   (A) 11 (B) 21 (C) 37 (D) 73

ಉತ್ತರ: ____________________

@KTBS NOT TO BE REPUBLISHED

3. ಕೆಳಗಿನ ಪಿರಮಿಡ್‌ನ್ನು ಪೂರ್ಣಗೊಳಿಸಲು ಇವುಗಳಲ್ಲಿ ಕ್ರಮವಾಗಿ ಬಳಸಬೇಕಾದ ಸೂಕ್ತ ಸಂಖ್ಯೆಗಳು




   (A) 48, 23, 25 (B) 48, 25, 23 (C) 23, 25, 48 (D) 25 ,48, 23

ಉತ್ತರ: ____________________

4. ಒಂದು ಸಂಖ್ಯಾ ಪಿರಮಿಡ್‌ನ ಮೇಲಿನ ಸಾಲಿನಲ್ಲಿರುವ ಸಂಖ್ಯೆ 10 ಆಗಿದೆ. ಅದರ ಕೆಳಗಿನ ಸಾಲಿನ ಸಂಖ್ಯೆಗಳಲ್ಲಿ ಒಂದು ಸಂಖ್ಯೆಯು 4 ಆಗಿದ್ದರೆ, ಮತ್ತೊಂದು ಸಂಖ್ಯೆಯು

   (A) 14 (B) 4 (C) 6 (D) 5

ಉತ್ತರ: ____________________

5. ಒಂದು ಸಂಖ್ಯಾ ಪಿರಮಿಡ್‌ನಲ್ಲಿ ಪ್ರತಿಯೊಂದು ಸಂಖ್ಯೆಯು ಅದರ ಕೆಳಗಿನ ಎರಡು ಸಂಖ್ಯೆಗಳ ಮೊತ್ತವಾಗಿದೆ. ಕೆಳಗಿನ ಸಾಲಿನಲ್ಲಿ a, b, c ಇದ್ದರೆ ಮೇಲಿನ ಸಾಲಿನ ಸಂಖ್ಯೆಗಳ ಮೊತ್ತ

(A) a+b+c (B) 2a + 2b + 2c (C) a + 2b + c (D) 3a + 3b + 3c

ಉತ್ತರ: __________

6. ಇವುಗಳಲ್ಲಿ ವಿರಹಾಂಕ – ಫಿಬೊನಾಚಿ ಸಂಖ್ಯೆಗಳು

(A) 1,2,3,5,8 (B) 1,2,3,5,7 (C) 1,2,3,6,12 (D) 1,2,4,8,16

ಉತ್ತರ: __________

7. ಕ್ಯಾಲೆಂಡರ್‌ನಲ್ಲಿ ಯಾವುದಾದರೂ 2×2 ಗ್ರಿಡ್‌ನ್ನು ಆರಿಸಿದಾಗ, ಆ ಗ್ರಿಡ್‌ನಲ್ಲಿರುವ ಸಂಖ್ಯೆಗಳ ಮೊತ್ತಕ್ಕೆ ಸೂತ್ರವು

(A) ಅತಿ ದೊಡ್ಡ ಸಂಖ್ಯೆಯನ್ನು 4 ರಿಂದ ಗುಣಿಸುವುದು.

(B) ಅತಿ ಚಿಕ್ಕ ಸಂಖ್ಯೆಗೆ 16 ನ್ನು ಸೇರಿಸಿ 4 ರಿಂದ ಗುಣಿಸುವುದು.

(C) ಅತಿ ಚಿಕ್ಕ ಸಂಖ್ಯೆಗೆ 4 ರಿಂದ ಗುಣಿಸಿ 16 ನ್ನು ಸೇರಿಸುವುದು.

(D) ಅತೀ ದೊಡ್ಡ ಸಂಖ್ಯೆಯನ್ನು 2 ರಿಂದ ಗುಣಿಸುವುದು.

ಉತ್ತರ: __________

8. ಒಂದು ಕ್ಯಾಲಂಡರಿನ 2×2 ಗ್ರಿಡ್‌ನಲ್ಲಿರುವ ಅತ್ಯಂತ ಚಿಕ್ಕ ಸಂಖ್ಯೆ 5 ಆದರೆ, ಆ ಗ್ರಿಡ್‌ನಲ್ಲಿರುವ ಸಂಖ್ಯೆಗಳ ಮೊತ್ತ

(A) 30 (B) 36 (C) 40 (D) 44

ಉತ್ತರ: __________

9. ಒಬ್ಬ ವಿದ್ಯಾರ್ಥಿಯು ಕ್ಯಾಲೆಂಡರ್‌ನ 2×2 ಚೌಕದ ಒಟ್ಟು ಮೊತ್ತ 100 ಎಂದು ಹೇಳಿದರೆ, ಆ ಚೌಕದ ಅತಿ ಚಿಕ್ಕ ಸಂಖ್ಯೆಯು

(A) 15 (B) 17 (C) 21 (D) 25

ಉತ್ತರ: __________

© KTBS NOT TO BE REPUBLISHED

10. ಕ್ಯಾಲೆಂಡರ್‌ನಲ್ಲಿ ಕಂಬಸಾಲುಗಳಲ್ಲಿನ ಯಾವುದೇ ಪಾರ್ಶ್ವ ಸಂಖ್ಯೆಗಳ ನಡುವಿನ ವ್ಯತ್ಯಾಸವು

(A) 1 (B) 7 (C) 5 (D) 10

ಉತ್ತರ: ______

11. ಆಗಸ್ಟ್ 2025 ರಲ್ಲಿ a = 6 ಆದರೆ, ಗ್ರಿಡ್ ಸಂಖ್ಯೆಗಳು 6, 7, 13 ಆದರೆ, ಆ ಗ್ರಿಡ್‌ನ ಕೊನೆಯ ಸಂಖ್ಯೆ

(A) 12 (B) 15 (C) 14 (D) 20

ಉತ್ತರ: ______

12. ಎರಡು ಅಂಕಿಯ ಅತಿ ದೊಡ್ಡ ಸಂಖ್ಯೆ ಮತ್ತು ಮೂರು ಅಂಕಿಯ ಅತಿ ದೊಡ್ಡ ಸಂಖ್ಯೆಯ ಗುಣಲಬ್ಧ

(A) 98901 (B) 99000 (C) 98001 (D) 99900

ಉತ್ತರ: ______

13. 3, 5, 9 ಅಂಕಿಗಳಿಂದ ರಚಿಸಬಹುದಾದ ಅತಿ ದೊಡ್ಡ ಗುಣಲಬ್ಧವು

(A) $35 \times 9$ (B) $59 \times 3$ (C) $53 \times 9$ (D) $95 \times 3$

ಉತ್ತರ: ______

14. ಮೂರು ಅಂಕಿ ಸಂಖ್ಯೆ abc ಯ ಅಂಕಿಗಳನ್ನು ಚಕ್ರೀಯವಾಗಿ ಬದಲಾಯಿಸಿದಾಗ (abc + bca + cab) ಸಿಗುವ ಮೊತ್ತವು ಕೆಳಗಿನ ಈ ಸಂಖ್ಯೆಯಿಂದ ಭಾಗವಾಗುವುದಿಲ್ಲ

(A) 3 (B) 37 (C) 111 (D) 5

ಉತ್ತರ: ______

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ: (ಒಂದು ಅಂಕದ ಪ್ರಶ್ನೆಗಳು)**

15. ಒಂದು ಸಂಖ್ಯೆಯ ಎರಡರಷ್ಟಕ್ಕೆ 4ನ್ನು ಕೂಡಿದಾಗ 10 ಆಗುತ್ತದೆ. ಇದನ್ನು ಸಮೀಕರಣ ರೂಪದಲ್ಲಿ ಬರೆಯಿರಿ.

ಉತ್ತರ:

©KTBS NOT TO BE REPUBLISHED

16. ಒಬ್ಬ ಹುಡುಗನ ಈಗಿನ ವಯಸ್ಸು '$x$' ಆಗಿದೆ, 5 ವರ್ಷಗಳ ನಂತರ ಅವನ ವಯಸ್ಸು 20 ಆದರೆ, ಅವನ ಈಗಿನ ವಯಸ್ಸು ಎಷ್ಟು?

ಉತ್ತರ:

17. ಒಂದು ಚೌಕದ ಸುತ್ತಳತೆ 24 cm ಆಗಿದೆ. ಚೌಕದ ಒಂದು ಬದಿಯ ಉದ್ದವನ್ನು ಕಂಡು ಹಿಡಿಯಿರಿ.

ಉತ್ತರ:

18. ಒಂದು ಪಿರಮಿಡ್‌ನ ಕೆಳಗಿನ ಸಾಲಿನಲ್ಲಿ 5 ಮತ್ತು 8 ಎಂಬ ಸಂಖ್ಯೆಗಳಿವೆ ಅದರ ಮೇಲಿನ ಸಾಲಿನ ಸಂಖ್ಯೆಯನ್ನು ಕಂಡುಹಿಡಿಯಿರಿ.

ಉತ್ತರ:

19. ಒಂದು ಪಿರಮಿಡ್‌ನ ಮೇಲಿನ ಸಂಖ್ಯೆ 20 ಆಗಿದೆ, ಅದರ ಕೆಳಗಿನ ಸಾಲಿನ ಒಂದು ಸಂಖ್ಯೆಯು 12 ಆಗಿದ್ದರೆ ಮತ್ತೊಂದು ಸಂಖ್ಯೆ ಯಾವುದು?

ಉತ್ತರ:

20. ಪಿರಮಿಡ್‌ನ ನಿಯಮದಂತೆ ಕೆಳಗಿನ ಸಾಲಿನಲ್ಲಿ $x$, 4, 6 ಎಂಬ ಸಂಖ್ಯೆಗಳಿವೆ. ಎರಡನೇ ಸಾಲಿನಲ್ಲಿ 9 ಮತ್ತು 10 ಇವೆ, ಹಾಗಾದರೆ '$x$' ನ ಬೆಲೆ ಎಷ್ಟು?

ಉತ್ತರ:

21. ಒಂದು $2 \times 2$ ಕ್ಯಾಲೆಂಡರ್ ಚೌಕದ ಒಟ್ಟು ಮೊತ್ತ 44 ಆದರೆ, ಆ ಚೌಕದ ಮೊದಲ ದಿನಾಂಕ ಯಾವುದು?

ಉತ್ತರ:

©KTBS NOT TO BE REPUBLISHED

22. 2×2 ಕ್ಯಾಲೆಂಡರ್ ಚೌಕದಲ್ಲಿ ಮೊದಲ ಸಂಖ್ಯೆ 'n' ಆಗಿದ್ದರೆ, ಅದರ ಕೆಳಗಿನ ಸಂಖ್ಯೆ ಯಾವುದು?

ಉತ್ತರ:

23. ಎರಡು ಸಂಖ್ಯೆಗಳ ಮೊತ್ತ 10 ಆಗಿದ್ದರೆ, ಅವುಗಳ ಅತಿ ದೊಡ್ಡ ಗುಣಲಬ್ಧ ಕಂಡುಹಿಡಿಯಿರಿ.

ಉತ್ತರ:

24. $a + b + c = 9$ ಆಗಿದ್ದು a, b, c ಧನಪೂರ್ಣಾಂಕಗಳಾಗಿದ್ದರೆ, $a \times b \times c$ ನ ಗರಿಷ್ಟ ಬೆಲೆ ಎಷ್ಟು?

ಉತ್ತರ:

25. ಒಂದು ಸಂಖ್ಯೆಯು 2 ರಿಂದ ಭಾಗವಾಗಬೇಕಾದರೆ ಅದರ ಬಿಡಿ ಸ್ಥಾನದಲ್ಲಿ ಯಾವ ಅಂಕಿಗಳು ಇರಬೇಕು?

ಉತ್ತರ:

26. abc ಎಂಬ ಮೂರಂಕಿಯ ಸಂಖ್ಯೆಯು 5 ರಿಂದ ಭಾಗವಾಗಬೇಕಾದರೆ 'c' ನ ಬೆಲೆ ಏನಾಗಿರಬೇಕು?

ಉತ್ತರ:

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ: (ಎರಡು ಅಂಕಗಳ ಪ್ರಶ್ನೆಗಳು)**

27. ಒಬ್ಬ ಹುಡುಗ ಒಂದು ಸಂಖ್ಯೆಯನ್ನು 5 ರಿಂದ ಗುಣಿಸಿ ಬಂದ ಉತ್ತರದಿಂದ 3 ನ್ನು ಕಳೆದಾಗ 12 ಸಿಗುತ್ತದೆ, ಆ ಸಂಖ್ಯೆ ಯಾವುದು?

ಉತ್ತರ:

@KTBS NOT TO BE REPUBLISHED

28. ಒಬ್ಬಳು ಹುಡುಗಿಯು, ಒಂದು ಸಂಖ್ಯೆಯನ್ನು ಮನಸ್ಸಿನಲ್ಲಿ ಅಂದುಕೊಂಡು ಅದಕ್ಕೆ 5 ನ್ನು ಕೂಡಿ ನಂತರ 2 ರಿಂದ ಗುಣಿಸಿದಾಗ ಅವಳಿಗೆ 20 ಸಿಗುತ್ತದೆ. ಹಾಗಾದರೆ ಅವಳು ಅಂದುಕೊಂಡ ಸಂಖ್ಯೆಯನ್ನು ಕಂಡುಹಿಡಿಯಿರಿ.

ಉತ್ತರ:

29. ಒಂದು ಸಂಖ್ಯೆಯನ್ನು ಎರಡರಷ್ಟಕ್ಕೆ 10 ನ್ನು ಕೂಡಿ, ಈ ಮೊತ್ತವನ್ನು ಅರ್ಧ ಮಾಡಿದರೆ 15 ಬರುತ್ತದೆ. ಆ ಸಂಖ್ಯೆಯನ್ನು ಕಂಡುಹಿಡಿಯಿರಿ.

ಉತ್ತರ:

@KTBS
NOT TO BE REPUBLISHED

30. ದಿನಾಂಕ ತಂತ್ರವನ್ನು ಬಳಸಿಕೊಂಡು ಹಂತಗಳನ್ನು ಅನುಸರಿಸಿ ಅಂತಿಮ ಉತ್ತರವಾಗಿ 894 ನ್ನು ಪಡೆದರೆ, ಪ್ರಾರಂಭದ ದಿನಾಂಕ ಯಾವುದು?

ಉತ್ತರ:

31. ಈ ಸಂಖ್ಯಾ ಪಿರಮಿಡ್ ಪೂರ್ಣಗೊಳಿಸಿ.

ಉತ್ತರ:




32. ವಿರಹಾಂಕ – ಫಿಬೊನಾಚಿ ಸರಣಿಯ ಮೊದಲ ಆರು ಸಂಖ್ಯೆಗಳು 1, 1, 2, 3, 5, 8 ಆಗಿದ್ದರೆ, ನಂತರದ ಮೂರು ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಉತ್ತರ:

@KTBS NOT TO BE REPUBLISHED

33. ಒಂದು ವಿರಹಾಂಕ – ಫಿಬೊನಾಚಿ ಸರಣಿಯಲ್ಲಿ ಸತತ ಎರಡು ಸಂಖ್ಯೆಗಳು $x$ ಮತ್ತು $x + 3$ ಆಗಿವೆ. ಇವುಗಳ ನಂತರ ಬರುವ ಸಂಖ್ಯೆ 13 ಆದರೆ, '$x$' ನ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ:

34. ಒಬ್ಬ ತಾಯಿಯ ಈಗಿನ ವಯಸ್ಸು 28 ವರ್ಷ, ಮಗಳ ವಯಸ್ಸು 4 ವರ್ಷ. ಎಷ್ಟು ವರ್ಷಗಳ ನಂತರ ತಾಯಿಯ ವಯಸ್ಸು ತನ್ನ ಮಗಳ ವಯಸ್ಸಿನ 3 ರಷ್ಟಾಗುತ್ತದೆ.

ಉತ್ತರ:

35. ಮೂರು ಅಂಕಿ ಸಂಖ್ಯೆ 724 ನ್ನು ಮತ್ತು ಅದರ ಹಿಮ್ಮುಖಗೊಳಿಸಿದ ಸಂಖ್ಯೆಯ ವ್ಯತ್ಯಾಸವು 99 ರಿಂದ ಭಾಗಿಸಲ್ಪಡುತ್ತದೆ ಎಂದು ಸಾಧಿಸಿ.

ಉತ್ತರ:

@KTBS
NOT TO BE REPUBLISHED

36. ಫಿಬೊನಾಚಿ ಸರಣಿಯ ಮೊದಲ 10 ಸಂಖ್ಯೆಗಳ ಮೊತ್ತವು ಸರಣಿಯ 12 ನೇ ಸಂಖ್ಯೆಗಿಂತ 1 ಕಡಿಮೆ ಇರುತ್ತದೆ. ಇದನ್ನು ಪರೀಕ್ಷಿಸಿ.

ಉತ್ತರ:

**IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:** **(ಮೂರು ಅಂಕಗಳ ಪ್ರಶ್ನೆಗಳು)**

@KTBS
NOT TO BE REPUBLISHED

37. ಒಂದು ಕ್ಯಾಲೆಂಡರಿನ $2 \times 2$ ಗ್ರಿಡ್‌ನಲ್ಲಿರುವ ಸಂಖ್ಯೆಗಳ ಮೊತ್ತ 52 ಆಗಿದೆ. ಗ್ರಿಡ್‌ನಲ್ಲಿ ಬರುವ 4 ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಉತ್ತರ:

38. abc, bca ಮತ್ತು cab ಎಂಬ ಮೂರು ಅಂಕಿ ಸಂಖ್ಯೆಗಳ ಮೊತ್ತವು ಯಾವಾಗಲೂ 37 ಮತ್ತು 111 ರಿಂದ ಭಾಗವಾಗುತ್ತದೆ ಎಂದು ತೋರಿಸಿ.

ಉತ್ತರ:

**V. ಈ ಪ್ರಶ್ನೆಗಳಿಗೆ ಉತ್ತರಿಸಿ:** **(ನಾಲ್ಕು ಅಂಕಗಳ ಪ್ರಶ್ನೆಗಳು)**

39. ಕೆಳಗಿನ ಗ್ರಿಡ್‌ಗಳಲ್ಲಿ ವಿವಿಧ ಆಕಾರಗಳ ಮೌಲ್ಯಗಳನ್ನು ಕಂಡುಹಿಡಿದು ಖಾಲಿ ಚೌಕಗಳನ್ನು ಭರ್ತಿ ಮಾಡಿ.

ಉತ್ತರ:







@KTBS
NOT TO BE REPUBLISHED

## ಘಟಕ ಪರೀಕ್ಷೆ:

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.**

1. ಒಂದು ಸಂಖ್ಯೆಯನ್ನು $x$ ಎಂದು ಭಾವಿಸಿ ಅದನ್ನು ಮೂರು ಪಟ್ಟು ಮಾಡಿ 9 ನ್ನು ಕೂಡಿದರೆ ಬರುವ ಬೀಜೋಕ್ತಿ

   (A) $x + 9$ (B) $3x + 9$ (C) $3(x + 9)$ (D) $9x + 3$

ಉತ್ತರ: ______________________

2. ಕ್ಯಾಲೆಂಡರ್‌ನಲ್ಲಿ $2\times2$ ಚೌಕದ ನಾಲ್ಕು ಸಂಖ್ಯೆಗಳ ಮೊತ್ತವು ಈ ಕೆಳಗಿನ ಯಾವುದರ ಗುಣಕವಾಗಿರುತ್ತದೆ

   (A) 6 (B) 3 (C) 4 (D) 5

ಉತ್ತರ: ______________________

@KTBS NOT TO BE REPUBLISHED

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:**

3. ಒಂದು ಸಂಖ್ಯೆಯನ್ನು ಆರಿಸಿ, ಅದನ್ನು ಎರಡರಿಂದ ಗುಣಿಸಿ 10ನ್ನು ಕೂಡಿ ಬಂದ ಉತ್ತರವನ್ನು ಎರಡರಿಂದ ಭಾಗಿಸಿ ನಂತರ ನೀವು ಮೊದಲು ಆರಿಸಿದ ಸಂಖ್ಯೆಯನ್ನು ಅದರಲ್ಲಿ ಕಳೆದಾಗ ಬರುವ ಉತ್ತರವೇನು?

ಉತ್ತರ:

4. ಒಬ್ಬ ವಿದ್ಯಾರ್ಥಿನಿಯು ಒಂದು ದಿನಾಂಕವನ್ನು ಆರಿಸಿ ಕೆಲವು ಹಂತಗಳನ್ನು ಅನುಸರಿಸಿದ ನಂತರ ಬರುವ ಉತ್ತರ 1390 ಎಂದು ಹೇಳುತ್ತಾಳೆ, ಅವಳು ಆರಿಸಿದ ದಿನಾಂಕ ಯಾವುದು?

ಉತ್ತರ:

5. ಈ ಸಂಖ್ಯಾ ಪಿರಮಿಡ್ ಪೂರ್ಣಗೊಳಿಸಿ.

| | | | |
|---|---|---|---|
| 91 | | | |
| 46 | 45 | | |
| 24 | | 23 | |
| 13 | | | 12 |

6. ಒಂದು ಕ್ಯಾಲೆಂಡರ್‌ನಲ್ಲಿ 2×2 ಚೌಕದಲ್ಲಿರುವ 4 ಸಂಖ್ಯೆಗಳ ಮೊತ್ತವು 80 ಆಗಿದ್ದರೆ, ಆ ನಾಲ್ಕು ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಉತ್ತರ:

@KTBS
NOT TO BE REPUBLISHED

7. ಒಂದು ಸಂಖ್ಯೆಯ ಪಿರಮಿಡ್‌ನ ಕೆಳಗಿನ ಸಾಲಿನಲ್ಲಿ $x$, $(x + 2)$, $(x + 4)$ ಎಂಬ ಮೂರು ಸಂಖ್ಯೆಗಳಿವೆ. ಮೇಲಿನ ಸಾಲಿನ ಸಂಖ್ಯೆಯು ಅದರ ಕೆಳಗಿರುವ ಎರಡು ಸಂಖ್ಯೆಗಳ ಮೊತ್ತಕ್ಕೆ ಸಮನಾಗಿದೆ, ಪಿರಮಿಡ್‌ನ ತುತ್ತತುದಿಯ ಸಂಖ್ಯೆ 40 ಆಗಿದ್ದರೆ $x$ ನ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ:

@KTBS
NOT TO BE REPUBLISHED

# ಅಧ್ಯಾಯ–7
# ವಿಸ್ತೀರ್ಣ

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.**

1. ಒಂದು ಆಯತವು 4 cm ಉದ್ದ ಮತ್ತು 6 cm ಅಗಲವಿದೆ. ಅದರ ವಿಸ್ತೀರ್ಣವು

(A) 24 $cm^2$ (B) 12 $cm^2$ (C) 10 $cm^2$ (D) 20 $cm^2$

ಉತ್ತರ:

2. ಒಂದು ಆಯತದ ವಿಸ್ತೀರ್ಣ 72 $cm^2$ ಹಾಗೂ ಉದ್ದ 6 cm ಆದರೆ, ಅದರ ಅಗಲವು

(A) 18 cm (B) 36 cm (C) 12 cm (D) 24 cm

ಉತ್ತರ:

3. 20 cm ಸುತ್ತಳತೆ ಹೊಂದಿರುವ ಚೌಕದ ವಿಸ್ತೀರ್ಣ

(A) 50 $cm^2$ (B) 16 $cm^2$ (C) 40 $cm^2$ (D) 25 $cm^2$

ಉತ್ತರ:

4. ಎತ್ತರ 8 cm, ಪಾದ 5 cm ಇರುವ ತ್ರಿಭುಜದ ವಿಸ್ತೀರ್ಣ

(A) 20 $cm^2$ (B) 30 $cm^2$ (C) 40 $cm^2$ (D) 10 $cm^2$

ಉತ್ತರ:

5. ಸಮಾಂತರ ಚತರ್ಭುಜದ ವಿಸ್ತೀರ್ಣದ ಸೂತ್ರ

(A) $\frac{1}{2}$ × ಪಾದ × ಎತ್ತರ (B) 2 × ಪಾದ × ಎತ್ತರ

(C) 4 × ಪಾದ × ಎತ್ತರ (D) ಪಾದ × ಎತ್ತರ

ಉತ್ತರ:

© KTBS NOT TO BE REPUBLISHED

6. 10 cm ಮತ್ತು 12 cm ಕರ್ಣಗಳನ್ನು ಹೊಂದಿರುವ ವಜ್ರಾಕೃತಿಯ ವಿಸ್ತೀರ್ಣ

(A) 120 $cm^2$ (B) 60 $cm^2$ (C) 240 $cm^2$ (D) 30 $cm^2$

ಉತ್ತರ:

7. ಒಂದು ತ್ರಾಪಿಜ್ಯದ ವಿಸ್ತೀರ್ಣ 60 $cm^2$, ಸಮಾಂತರ ಬಾಹುಗಳ ಮೊತ್ತ 30 cm ಆಗಿದೆ. ಅದರ ಎತ್ತರವು

(A) 4 cm (B) 8 cm (C) 12 cm (D) 24 cm

ಉತ್ತರ:

8. ಒಂದು ತ್ರಿಭುಜದ ಪಾದ 'a' ಆಗಿದ್ದು, ಅದರ ಎತ್ತರ ಪಾದದ ಎರಡರಷ್ಟಿದ್ದರೆ, ಆ ತ್ರಿಭುಜದ ವಿಸ್ತೀರ್ಣ

(A) $a^2$ (B) $2a^2$ (C) $12 \times a^2$ (D) $12 \times a^2$

ಉತ್ತರ:

9. ಒಂದು ಆಯತದ ವಿಸ್ತೀರ್ಣ 48 $cm^2$ ಹಾಗೂ ಅದರ ಉದ್ದ ಅಗಲದ ಮೂರರಷ್ಟಿದ್ದರೆ, ಕ್ರಮವಾಗಿ ಆಯತದ ಉದ್ದ ಮತ್ತು ಅಗಲಗಳ ಅಳತೆ

(A) 6 cm ಮತ್ತು 8 cm (B) 4 cm ಮತ್ತು 12 cm

(C) 12 cm ಮತ್ತು 4 cm (D) 8 cm ಮತ್ತು 6 cm

ಉತ್ತರ:

10. ಒಂದು ಲಂಬಕೋನ ಸಮದ್ವಿಬಾಹು ತ್ರಿಭುಜದ ಒಂದು ಸಮಬಾಹು 8 cm ಆದರೆ, ತ್ರಿಭುಜದ ವಿಸ್ತೀರ್ಣ

(A) 16 $cm^2$ (B) 48 $cm^2$ (C) 64 $cm^2$ (D) 32 $cm^2$

ಉತ್ತರ:

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:** **(ಒಂದು ಅಂಕದ ಪ್ರಶ್ನೆಗಳು)**

11. '5 ಇಂಚು' ಇದನ್ನು ಸೆಂಟಿಮೀಟರ್‌ಗಳಲ್ಲಿ ವ್ಯಕ್ತಪಡಿಸಿ.

ಉತ್ತರ:

@KTBS NOT TO BE REPUBLISHED

12. ಒಂದು ತ್ರಾಪಿಜ್ಯದ ಸಮಾಂತರ ಬಾಹುಗಳು ಸಮನಾದಾಗ ಉಂಟಾಗುವ ಚತುರ್ಭುಜವನ್ನು ಹೆಸರಿಸಿ.

ಉತ್ತರ:

13. ಒಂದು ಚೌಕದ ಉದ್ದವನ್ನು ದ್ವಿಗುಣಗೊಳಿಸಿದಾಗ, ಅದರ ವಿಸ್ತೀರ್ಣದಲ್ಲಾಗುವ ಹೆಚ್ಚಳದ ಪ್ರಮಾಣ ಎಷ್ಟು?

ಉತ್ತರ:

14. 98 $cm^2$ ವಿಸ್ತೀರ್ಣ ಹೊಂದಿರುವ ವಜ್ರಾಕೃತಿಯ ಕರ್ಣಗಳ ಗುಣಲಬ್ಧ ಕಂಡುಹಿಡಿಯಿರಿ.

ಉತ್ತರ:

@KTBS
NOT TO BE REPUBLISHED

15. ಒಂದು ಆಯತದ ಸುತ್ತಳತೆ 46 cm ಆದರೆ, ಅದರ ಉದ್ದ ಮತ್ತು ಅಗಲಗಳ ಮೊತ್ತ ಕಂಡು ಹಿಡಿಯಿರಿ.

ಉತ್ತರ:

16. ಎಲ್ಲಾ ಬಾಹುಗಳು ಸಮನಾಗಿರುವ ಸಮಾಂತರ ಚತುರ್ಭುಜಗಳನ್ನು ಹೆಸರಿಸಿ.

ಉತ್ತರ:

17. ಒಂದು ವಜ್ರಾಕೃತಿಯ ಬಾಹುವಿನ ಅಳತೆ 7.5 cm ಆದರೆ, ಅದರ ಸುತ್ತಳತೆ ಕಂಡುಹಿಡಿಯಿರಿ.

ಉತ್ತರ:

18. ತ್ರಾಪಿಜ್ಯದ ವಿಸ್ತೀರ್ಣ ಕಂಡುಹಿಡಿಯುವ ಸೂತ್ರ ಬರೆಯಿರಿ.

ಉತ್ತರ:

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(ಎರಡು ಅಂಕಗಳ ಪ್ರಶ್ನೆಗಳು)**

19. ಒಂದು ತ್ರಾಪಿಜ್ಯದ ವಿಸ್ತೀರ್ಣವು 162 $cm^2$ ಹಾಗೂ ಎತ್ತರ 9 cm ಮತ್ತು ಒಂದು ಸಮಾಂತರ ಬಾಹು 15 cm ಆದರೆ, ಮತ್ತೊಂದು ಸಮಾಂತರ ಬಾಹುವಿನ ಅಳತೆ ಕಂಡುಹಿಡಿಯಿರಿ.

ಉತ್ತರ:

20. ಒಂದು ಆಯತವು 18 cm ಉದ್ದ, 10 cm ಅಗಲ ಇದ್ದರೆ, ಅದರ ಕರ್ಣ ಉಂಟುಮಾಡುವ ತ್ರಿಭುಜದ ವಿಸ್ತೀರ್ಣ ಕಂಡುಹಿಡಿಯಿರಿ.

ಉತ್ತರ:

@KTBS NOT TO BE REPUBLISHED

21. ಒಂದು ವಜ್ರಾಕೃತಿಯ ಕರ್ಣಗಳು 3:4 ಅನುಪಾತದಲ್ಲಿದ್ದು, ಅದರ ವಿಸ್ತೀರ್ಣ 54 $cm^2$ ಆದರೆ, ಕರ್ಣಗಳ ಅಳತೆಗಳನ್ನು ಕಂಡುಹಿಡಿಯಿರಿ.

ಉತ್ತರ:

22. ಒಂದು ಆಯತದ ವಿಸ್ತೀರ್ಣ 96 $cm^2$ ಮತ್ತು ಪಾದದ ಅಳತೆ 8 cm ಆದರೆ ಆಯತದ ಸುತ್ತಳತೆ ಕಂಡುಹಿಡಿಯಿರಿ.

ಉತ್ತರ:

@KTBS NOT TO BE REPUBLISHED

23. ಪಕ್ಕದ ಚಿತ್ರದಲ್ಲಿ, ತ್ರಾಪಿಜ್ಯದ ವಿಸ್ತೀರ್ಣ ಕಂಡುಹಿಡಿಯಿರಿ.




ಉತ್ತರ:

24. ಒಂದು ಸಮಬಾಹು ತ್ರಿಭುಜ ಅಥವಾ ಅದೇ ಅಳತೆ ಬಾಹುವಿರುವ ಚೌಕ, ಇವೆರಡರಲ್ಲಿ ಯಾವುದರ ವಿಸ್ತೀರ್ಣವು ಹೆಚ್ಚು ಮತ್ತು ಏಕೆ?

ಉತ್ತರ:

25. ಒಂದು ಚೌಕದ ವಿಸ್ತೀರ್ಣ 441 $cm^2$ ಆದರೆ, ಅದರ ಸುತ್ತಳತೆ ಕಂಡುಹಿಡಿಯಿರಿ.

ಉತ್ತರ:

@KTBS
NOT TO BE REPUBLISHED

26. ಒಂದು A4 ಹಾಳೆಯ ಅಂಚುಗಳ ಅಳತೆಗಳು 21 cm ಮತ್ತು 29.7 cm ಇದ್ದರೆ, ಈ ಹಾಳೆಯ ವಿಸ್ತೀರ್ಣ ಕಂಡುಹಿಡಿಯಿರಿ.

ಉತ್ತರ:

**IV.** **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(ಮೂರು ಅಂಕಗಳ ಪ್ರಶ್ನೆಗಳು)**

27. ಒಂದು ಆಯತದ ಉದ್ದ ಮತ್ತು ಅಗಲಗಳು ಕ್ರಮವಾಗಿ 9 cm ಮತ್ತು 3 cm ಆದರೆ, ಆಯತದ ವಿಸ್ತೀರ್ಣ ಮತ್ತು ಸುತ್ತಳತೆಗಳನ್ನು ಕಂಡುಹಿಡಿಯಿರಿ.

ಉತ್ತರ:

28. ಒಂದೇ ಪಾದದ ಮೇಲೆ ನಿಂತಿರುವ ತ್ರಿಭುಜ ಮತ್ತು ಆಯತಗಳ ವಿಸ್ತೀರ್ಣವು ಸಮವಾಗಿದೆ. ಅವುಗಳ ಪಾದದ ಉದ್ದ 10 cm ಹಾಗೂ ವಿಸ್ತೀರ್ಣವು 50 $cm^2$ ಆದರೆ, ಅವುಗಳ ಎತ್ತರಗಳ ವ್ಯತ್ಯಾಸ ಕಂಡುಹಿಡಿಯಿರಿ.

ಉತ್ತರ:

@KTBS
NOT TO BE REPUBLISHED

29. ಒಂದು ವಜ್ರಾಕೃತಿಯ ಸುತ್ತಳತೆ 52 cm, ಹಾಗೂ ಅದರ ಒಂದು ಕರ್ಣದ ಅಳತೆಯು 24 cm ಆದರೆ, ಅದರ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಉತ್ತರ:

@KTBS NOT TO BE REPUBLISHED

30. ಚಿತ್ರದಲ್ಲಿ ABCD ಒಂದು ಆಯತ, AD ಯ ಮಧ್ಯಬಿಂದು E ಆಗಿದ್ದು BC ಮತ್ತು DC ಗಳ ಅಳತೆಗಳು ಕ್ರಮವಾಗಿ 8 cm, 12 cm ಆದರೆ, ಉಂಟಾಗಿರುವ ತ್ರಾಪಿಜ್ಯ ಮತ್ತು ತ್ರಿಭುಜದ ವಿಸ್ತೀರ್ಣ ಕಂಡುಹಿಡಿಯಿರಿ.

ಉತ್ತರ:



**V. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(ನಾಲ್ಕು ಅಂಕಗಳ ಪ್ರಶ್ನೆಗಳು)**

31. ವಜ್ರಾಕೃತಿಯ ಆಕಾರದಲ್ಲಿರುವ ಮೈದಾನದ ಕರ್ಣಗಳು 50m ಮತ್ತು 120m ಆದರೆ, ಅದರ ಸುತ್ತಲೂ ಬೇಲಿ ಹಾಕಲು ₹ 25/m ನಂತೆ ತಗಲುವ ವೆಚ್ಚವನ್ನು ಲೆಕ್ಕಾಚಾರ ಮಾಡಿ.

ಉತ್ತರ:

32. ಒಬ್ಬ ರೈತನ ಜಮೀನು ತ್ರಾಪಿಜ್ಯಾಕಾರದಲ್ಲಿದ್ದು, ಸಮಾನಾಂತರ ಬದಿಗಳು 45m ಮತ್ತು 65m. ಅವುಗಳ ನಡುವಿನ ದೂರ 30m ಇರುತ್ತದೆ. ಪ್ರತಿ ಚದರ ಮೀಟರ್‌ನಲ್ಲಿ 10kg ತರಕಾರಿ ಬೆಳೆದರೆ, ಜಮೀನಿನಲ್ಲಿ ಬೆಳೆಯಬಹುದಾದ ಒಟ್ಟು ಇಳುವರಿಯನ್ನು ಕಂಡುಹಿಡಿಯಿರಿ.

ಉತ್ತರ:

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ಬಾಹುಗಳ ಅಳತೆಗಳನ್ನು ನೀಡಿದಾಗ ಆಯತ, ಚೌಕಗಳ ವಿಸ್ತೀರ್ಣ ಕಂಡುಹಿಡಿಯುವೆನು. | | | |
| 2 | ಎತ್ತರ, ಕರ್ಣಗಳ ಅಳತೆ, ಪಾದದ ಅಳತೆಗಳನ್ನು ನೀಡಿದಾಗ ಸಮಾಂತರ ಚತುರ್ಭುಜ, ವಜ್ರಾಕೃತಿ, ತ್ರಾಪಿಜ್ಯದ ವಿಸ್ತೀರ್ಣಗಳನ್ನು ಕಂಡುಹಿಡಿಯುವೆನು | | | |
| 3 | ನಿಯಮಿತ ಬಹುಭುಜಾಕೃತಿಯನ್ನು ವಿವಿಧ ಆಕೃತಿಗಳಾಗಿ ವಿಭಜಿಸಿ ಒಟ್ಟು ವಿಸ್ತೀರ್ಣವನ್ನು ಕಂಡುಹಿಡಿಯುವೆನು | | | |
| 4 | ನಿತ್ಯ ಜೀವನದಲ್ಲಿನ ವಿವಿಧ ವಿಸ್ತೀರ್ಣಗಳನ್ನು ಅಳೆದು ಅವುಗಳನ್ನು ವಿಭಿನ್ನ ಏಕಮಾನಗಳಲ್ಲಿ ವ್ಯಕ್ತಪಡಿಸುವೆನು. | | | |

**ಶಿಕ್ಷಕರ ಅಭಿಪ್ರಾಯ (✓ ಮಾಡಿ)**

| | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |

©KTBS NOT TO BE REPUBLISHED

## ಘಟಕ ಪರೀಕ್ಷೆ

1. ವಜ್ರಾಕೃತಿಯ ವಿಸ್ತೀರ್ಣವನ್ನು ಕಂಡುಹಿಡಿಯುವ ಸೂತ್ರ

(A) $\frac{1}{4}$ × ಕರ್ಣಗಳ ಗುಣಲಬ್ಧ (B) 2 × ಕರ್ಣಗಳ ಗುಣಲಬ್ಧ

(C) $\frac{1}{2}$ × ಕರ್ಣಗಳ ಗುಣಲಬ್ಧ (D) 4 × ಕರ್ಣಗಳ ಗುಣಲಬ್ಧ

ಉತ್ತರ:

2. ತ್ರಿಭುಜದ ಪಾದ 12 cm ಮತ್ತು ಎತ್ತರ 7 cm ಆದರೆ, ಅದರ ವಿಸ್ತೀರ್ಣವು

(A) 24 $cm^2$ (B) 42 $cm^2$ (C) 84 $cm^2$ (D) 21 $cm^2$

ಉತ್ತರ:

3. ಒಂದು ಎಕರೆ ಎಷ್ಟು ಚದರ ಅಡಿಗಳಿಗೆ ಸಮ ?

ಉತ್ತರ:

4. ಚೌಕದ ಬಾಹು $3x$ ಆದಾಗ, ಅದರ ವಿಸ್ತೀರ್ಣ ಎಷ್ಟು ?

ಉತ್ತರ:

5. ಒಂದು ವಜ್ರಾಕೃತಿಯ ಕರ್ಣಗಳು 10 cm ಮತ್ತು 16 cm ಆದರೆ, ಅದರ ವಿಸ್ತೀರ್ಣ ಕಂಡುಹಿಡಿಯಿರಿ.

ಉತ್ತರ:

@KTBS NOT TO BE REPUBLISHED

6. ಸಮವಾದ ಪಾದದ ಅಳತೆ ಹೊಂದಿರುವ ಎರಡು ತ್ರಿಭುಜಗಳ ಎತ್ತರಗಳ ಅನುಪಾತ 3:5 ಆಗಿದ್ದರೆ. ಅವುಗಳ ವಿಸ್ತೀರ್ಣಗಳ ಅನುಪಾತವನ್ನು ಕಂಡುಹಿಡಿಯಿರಿ.

ಉತ್ತರ:

7. ಒಂದು ತ್ರಿಭುಜದ ಪಾದವು 9 cm ಹಾಗೂ ಅದರ ವಿಸ್ತೀರ್ಣವು 36 $cm^2$ ಆದರೆ, ತ್ರಿಭುಜದ ಎತ್ತರ ಕಂಡುಹಿಡಿಯಿರಿ.

ಉತ್ತರ:

8. ಆಯತ ಮತ್ತು ಚೌಕ ಸಮವಾದ ಸುತ್ತಳತೆ ಹೊಂದಿದ್ದರೆ, ಹೆಚ್ಚು ವಿಸ್ತೀರ್ಣ ಹೊಂದಿರುವ ಆಕೃತಿ ಯಾವುದು ? ಸಮರ್ಥಿಸಿ.

ಉತ್ತರ:

@KTBS NOT TO BE REPUBLISHED

9. ಒಂದು ಗೋಡೆಯು ತ್ರಾಪಿಜ್ಯ ಆಕಾರವನ್ನು ಹೊಂದಿದ್ದು ಮೇಲ್ಭಾಗ ಮತ್ತು ಕೆಳಭಾಗ ಕ್ರಮವಾಗಿ 5m ಮತ್ತು 9m ಹಾಗೂ ಗೋಡೆಯ ಎತ್ತರ 4m ಆದರೆ, ಪ್ರತಿ ಚದರ ಮೀಟರಿಗೆ ₹ 50 ರಂತೆ ಬಣ್ಣ ಬಳಿಯಲು ತಗಲುವ ವೆಚ್ಚವನ್ನು ಲೆಕ್ಕಾಚಾರ ಮಾಡಿ.

ಉತ್ತರ: